# ಅಮೃತ ವರ್ಷವನ್ನು ಆಚರಿಸುತ್ತಿರುವ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮ

**ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ**—ಆತ್ಮನ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕಾಗಿ ಹಾಗೂ ಜಗತ್ತಿನ ಹಿತಕ್ಕಾಗಿ ಎಂಬ ಧ್ಯೇಯವಾಕ್ಯವನ್ನಿತ್ತು ಭಗವಾನ್ ಶ್ರೀರಾಮಕೃಷ್ಣರಿಂದ ಆದಿಷ್ಟರಾಗಿ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿ ಆದಾಗಲೇ ನೂರಾರು ವರ್ಷಗಳಾಗುತ್ತಿವೆ. ಶ್ರೀರಾಮಕೃಷ್ಣರ ದಿವ್ಯ ಸಂಪರ್ಕವನ್ನು ಪಡೆದಿದ್ದ ಹಾಗೂ ಸ್ವಾಮಿ ವಿವೇಕಾನಂದರ ದಿವ್ಯ ಜೀವನ ಮತ್ತು ಭವ್ಯ ವ್ಯಕ್ತಿತ್ವದಿಂದ ಪ್ರಭಾವಿತರಾದ ಸ್ವಾಮಿ ನಿರ್ಮಲಾನಂದಜೀಯವರು ದಕ್ಷಿಣ ಭಾರತದ ಹಲವೆಡೆಗಳಲ್ಲಿ—ಮುಖ್ಯವಾಗಿ ಕೇರಳ ಹಾಗೂ ಕರ್ನಾಟಕಗಳಲ್ಲಿ—ಹಲವು ರಾಮಕೃಷ್ಣ ಆಶ್ರಮಗಳನ್ನು ಸ್ಥಾಪಿಸಿ ಹಲವಾರು ಸಾಧು ಸಂನ್ಯಾಸಿಗಳಿಗೂ ಭಕ್ತ ಬಾಂಧವರಿಗೂ ಸ್ಫೂರ್ತಿಯನ್ನು ನೀಡಿದರು. ಅವರು ಕೊಡಗಿನ ಪೊನ್ನಂಪೇಟೆಯಲ್ಲಿ ಆಶ್ರಮವನ್ನು ಸ್ಥಾಪಿಸಿದ್ದು ೧೯೨೭ರಲ್ಲಿ. ಧರ್ಮಪ್ರಚಾರಕ್ಕಾಗಿ ಬೇರೆ ಬೇರೆ ಕಡೆ ಸಂಚಾರಮಾಡುತ್ತಿದ್ದ ಸ್ವಾಮಿ ನಿರ್ಮಲಾನಂದಜೀ ಒಮ್ಮೆ ಕೊಡಗಿಗೆ ಬಂದಿದ್ದಾಗ ವೀರಾಜಪೇಟೆಯ ಓರ್ವ ಭಕ್ತರ ಮನೆಯಲ್ಲಿ ಇಳಿದುಕೊಂಡಿದ್ದರು. ಆಗ ಅವರನ್ನು ಭೇಟಿಯಾಗಿ ಪೊನ್ನಂಪೇಟೆಯಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಬೇಕೆಂದು ಕೇಳಿಕೊಂಡವರು ಶ್ರೀ ಆಚಿಮಾಡ ಕಾಳಮ್ಮಯ್ಯ, ಶ್ರೀ ಕೆ.ಜಿ. ಚೆಂಗಪ್ಪ, ಡಾ. ಎಂ.ಎಂ. ಮುತ್ತಪ್ಪ ಮೊದಲಾದ ಕೊಡಗಿನ ಹಿರಿಯ ಧರ್ಮಪ್ರೇಮಿಗಳು. ಶ್ರೀ ಆಚಿಮಾಡ ಕಾಳಮ್ಮಯ್ಯ ಸ್ವತಃ ತಮ್ಮದೇ ಆದ ಮೂರು ಎಕರೆ ಸ್ಥಳವನ್ನು ಆಶ್ರಮಕ್ಕಾಗಿ ದಾನ ಮಾಡಲು ಸಂಕಲ್ಪಿಸಿದರು. ಸದ್ಯ ಆಶ್ರಮವಿರುವ ಪ್ರಶಾಂತ ತಾಣವನ್ನು ಕಂಡು ಸಂತುಷ್ಟರಾದ ಸ್ವಾಮಿ ನಿರ್ಮಲಾನಂದರು ಶ್ರೀರಾಮಕೃಷ್ಣರ ಕೃಪಾಸಂಕೇತವಾಗಿ ಆ ತಾಣ ದೊರೆಯುತ್ತಲಿದೆ ಎಂದು ತಮ್ಮ ಶುಭ ಹಾರೈಕೆಯಿಂದ ಆಶ್ರಮದ ನಿರ್ಮಾಣಕಾರ್ಯ ಸಾಗಲಿ ಎಂದರು. ಆಚಿಮಾಡ ಕಾಳಮ್ಮಯ್ಯನವರ ಶ್ರದ್ಧಾಭಕ್ತಿ ಉತ್ಸಾಹಗಳಿಂದ ಕೂಡಿದ ನೇತೃತ್ವದಲ್ಲಿ ಸಹೃದಯ ಸದ್ಭಕ್ತರ ಸಹಕಾರದಿಂದ ಕೆಲವೇ ತಿಂಗಳುಗಳಲ್ಲಿ ಆಶ್ರಮದ ಕಟ್ಟಡದ ನಿರ್ಮಾಣ ಸಾಧ್ಯವಾಯಿತು.

೧೯೨೭ರ ಜೂನ್ ತಿಂಗಳ ೧೦ ನೇ ತಾರೀಕಿನಂದು ಭಕ್ತವೃಂದದ ಹರ್ಷೋದ್ಗಾರಗಳೊಂದಿಗೆ ಸ್ವಾಮಿ ನಿರ್ಮಲಾನಂದಜೀಯವರು ಶ್ರೀರಾಮಕೃಷ್ಣ ಶಾರದಾಶ್ರಮದ ಉದ್ಘಾಟನೆಯನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಕೊಡಗಿನ ಸುಪುತ್ರರೂ ಪೂರ್ವಾಶ್ರಮದಲ್ಲಿ ಪಟ್ಟಡಮನೆಯವರೂ ಆದ ಪೂಜ್ಯ ಸ್ವಾಮಿ ಶಾಂಭವಾನಂದಜೀ ಆಶ್ರಮದ ಪ್ರಥಮ ಅಧ್ಯಕ್ಷರಾದರು. ಆಶ್ರಮಕ್ಕೆ ನಿವೇಶನವನ್ನು ನೀಡಿದ ಆಚಿಮಾಡ ಕಾಳಮ್ಮಯ್ಯನವರು ಕೆಲ ಕಾಲಾನಂತರ ಕಾಶಿಗೆ ತೆರಳಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ತಮ್ಮ ಕೊನೆಗಾಲವನ್ನು ಅಲ್ಲೇ ಕಳೆದು ಭಕ್ತರಿಗೆಲ್ಲ ಪ್ರಾತಃಸ್ಮರಣೀಯರಾದರೆಂಬುದನ್ನು ಮರೆಯುವಂತಿಲ್ಲ.

ಆ ಕಾಲದಲ್ಲಿ ಸುವ್ಯವಸ್ಥಿತವಾದ ವಿದ್ಯಾರ್ಥಿನಿಲಯವನ್ನು ಆಶ್ರಮದ ಆಶ್ರಯದಲ್ಲಿ ಸ್ವಾಮಿ ಶಾಂಭವಾನಂದರು ಸ್ಥಾಪಿಸಿದರು. ಆಗ ಕೊಡಗಿನಲ್ಲಿ ಭೀಕರವಾಗಿ ಹರಡಿದ್ದ ಮಲೇರಿಯಾ ಖಾಯಿಲೆಯ ನಿರ್ಮೂಲನಕ್ಕಾಗಿ ವಿಶೇಷ ಕಾರ್ಯಕ್ರಮ ಕೈಗೊಂಡು ದುಡಿದವರಲ್ಲಿ ಪೂಜ್ಯ ಸ್ವಾಮಿ ಶಾಂಭವಾನಂದರೇ ಅಗ್ರಮಾನ್ಯರು. ಮಲೇರಿಯಾ ನಿವಾರಣೆಗಾಗಿ ಕೊಡಗಿನ ಎಲ್ಲ ಭಾಗಗಳಲ್ಲೂ ಸಂಚರಿಸಿ ಸೋಬೆ ಹಾಡು ರಚಿಸಿ ಜನರನ್ನು ಎಚ್ಚರಿಸುವ ಕಾರ್ಯವನ್ನು ಸಮರ್ಥವಾಗಿ ಕೈಗೊಂಡರು.



ಸ್ವಾಮಿ ಶಾಂಭವಾನಂದರು

"ಮಾಯಾಲಾಂದ್ರ, ಚಿತ್ರಪಟ, ನಕಾಶೆ, ಭೂಪಟಗಳು, ರಾಸಾಯನಿಕ ವಸ್ತುಗಳು—ಇತ್ಯಾದಿ ಸಲಕರಣೆಗಳ ಸಹಿತ ಹಳ್ಳಿ ಹಳ್ಳಿಗಳಿಗೂ ಹೋಗಿ ನಮ್ಮ ಜನಗಳಿಗೆ ಆಧುನಿಕ ವೈಜ್ಞಾನಿಕ ವಿಚಾರಗಳನ್ನು ಕಲಿಸಿಕೊಡಿ. ಇದರಿಂದ ಅವರ ಇಹಲೋಕದ ಬಾಳು ಹಸನಾಗಲಿ. ಹಸಿದ ಹೊಟ್ಟೆಗೆ ವೇದಾಂತದ ಉಪದೇಶ ಮಾಡುವುದು ಮಹಾಪಾಪ" ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನು ಅಕ್ಷರಶಃ ಪಾಲಿಸಲು ಸ್ವಾಮಿ ಶಾಂಭವಾನಂದರು ಪಣ ತೊಟ್ಟಿದ್ದರು. ಜೇನು ಸಾಕಣೆಯ ಪ್ರಾಯೋಗಿಕ ಕೇಂದ್ರವನ್ನು ಮೊದಲು ಆಶ್ರಮದಲ್ಲಿ ಸ್ಥಾಪಿಸಿ ಕೊಡಗಿನಲ್ಲಿ ಸರ್ವತ್ರ ಪ್ರಚಾರ ಮಾಡಿದರು. ೧೯೩೮ರಲ್ಲಿ ಜೇನು ಮತ್ತು ಮೇಣ ಉತ್ಪಾದಕರ ಸಹಕಾರ ಸಂಸ್ಥೆಯನ್ನು ಸಾರ್ವಜನಿಕರ ಬೆಂಬಲದೊಂದಿಗೆ ಸ್ಥಾಪಿಸಿದರು.

ಅವರ ಶಿಸ್ತು, ನಿಷ್ಠೆ, ಸಮಯಪ್ರಜ್ಞೆ, ಆತ್ಮವಿಶ್ವಾಸ, ಮಹತ್ತಾದುದನ್ನು ಸಾಧಿಸುವ ಸಾಹಸ ಈ ಗುಣಗಳನ್ನು ಅವರ ಪರಿಚಿತರು ಕೊಂಡಾಡದೇ ಇಲ್ಲ. ೧೯೩೪ರ ಫೆಬ್ರವರಿ ೨೧, ೨೨, ೨೩ರಂದು ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದ ಕಾರ್ಯದಲ್ಲಿ ಮಾರ್ಗದರ್ಶನ ನೀಡಲು ಮಹಾತ್ಮಾ ಗಾಂಧೀಜಿ ತಮಿಳುನಾಡಿನಿಂದ ಕೂನೂರಿನ ಮಾರ್ಗವಾಗಿ ಕೊಡಗಿಗೆ ಬಂದರು. ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದಲ್ಲಿ ಗಾಂಧೀಜಿ

ತಂಗಿದ್ದರು. ಸ್ವಾಮಿ ಶಾಂಭವಾನಂದರು ಅಸ್ಪೃಶ್ಯರಿಗಾಗಿ ಸಲ್ಲಿಸುತ್ತಿರುವ ಸೇವೆಗಾಗಿ ಅವರು ಸಂತೋಷ ವ್ಯಕ್ತಪಡಿಸಿದರು. ಆ ಸಮಯದಲ್ಲಿ ಅಲ್ಲಿ ನಡೆದ ಸಭೆಗೆ ಹಳ್ಳಿಹಳ್ಳಿಗಳಿಂದ ಸುಮಾರು ಹತ್ತುಸಾವಿರ ಜನರು ಬಂದಿದ್ದರು. ವಿನೋಬಾ ಭಾವೆಯವರೂ ಈ ಕಡೆ ಸಂಚಾರ ಮಾಡುತ್ತಿದ್ದಾಗ ಆಶ್ರಮದಲ್ಲಿ ತಂಗಿದ್ದರು. ಸಂದರ್ಶಕರ ಪುಸ್ತಕದಲ್ಲಿ ಅವರ ಕೈಬರಹಗಳನ್ನು ಕಾಣಬಹುದಾಗಿದೆ.

೧೯೪೦ರಲ್ಲಿ ಸ್ವಾಮಿ ಪ್ರಣವೇಶಾನಂದರು ಆಶ್ರಮದ ಅಧ್ಯಕ್ಷರಾಗಿ ಒಂದೆರಡು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಸ್ವಾಮಿ ಶಾಂಭವಾನಂದಜೀ ಆಗ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ ನೇಮಕಗೊಂಡರು. ಪ್ರಣವೇಶಾನಂದರು ೧೯೪೨ರ ಹೊತ್ತಿಗೆ ಹೋಮಿಯೋಪತಿ ಚಿಕಿತ್ಸೆಯನ್ನು ಪ್ರಾರಂಭಿಸಿದ್ದರು. ೧೯೪೩ರಿಂದ ಸ್ವಾಮಿ ವಿಶ್ವಂಭರಾನಂದಜೀಯವರು ಎರಡು ದಶಕಗಳ ಕಾಲ ಆಶ್ರಮದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ಅವರ ನೇತೃತ್ವದಲ್ಲಿ ಅಲೋಪತಿ ಚಿಕಿತ್ಸಾಕ್ರಮದ ಔಷಧಾಲಯವನ್ನು ಪ್ರಾರಂಭಿಸಲಾಯಿತು. ಸುತ್ತಮುತ್ತ ಇಪ್ಪತ್ತೈದು ಗ್ರಾಮಗಳ ಜನರಿಗೆ ಔಷಧಾಲಯದ ಪ್ರಯೋಜನ ದೊರೆಯುವಂತಾಯಿತು. ಆಶ್ರಮದ ಮುಂಭಾಗದಲ್ಲಿರುವ ಎರಡು ಎಕರೆಗಳ ಪ್ರದೇಶದಲ್ಲಿರುವ ಈ ಔಷಧಾಲಯವೇ ಮುಂದೆ ಈ ಸರಹದ್ದಿನ ೨೫ ಹಾಸಿಗೆಗಳ ಉತ್ತಮ ಸಲಕರಣೆಗಳುಳ್ಳ ಆಸ್ಪತ್ರೆಯಾಗಿ ಪರಿಣಮಿಸಿತು.



ಪೊನ್ನಂಪೇಟೆ ಆಶ್ರಮದ ಆಸ್ಪತ್ರೆ

ಸ್ವಾಮಿ ವಿಶ್ವಂಭರಾನಂದರ ಬಳಿಕ ಸ್ವಾಮಿ ಅಮಿತಾನಂದಜೀ, ನಂತರ ೧೯೭೦ರಲ್ಲಿ ಸ್ವಾಮಿ ಶ್ರೀದಾನಂದಜಿ, ಸ್ವಾಮಿ ಸಂಪ್ರಜ್ಞಾನಂದಜಿ, ಮುಂದೆ ೧೯೮೬ರಲ್ಲಿ ಈಗ ಫ್ರಾನ್ಸಿನ ಮಠದ ಅಧ್ಯಕ್ಷರಾಗಿರುವ ಸ್ವಾಮಿ ವೀತಮೋಹಾನಂದಜಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ನಂತರ ಬಂದವರೇ ಸ್ವಾಮಿ ಸುಖಾತ್ಮಾನಂದರು, ಆ ಬಳಿಕ ಸ್ವಾಮಿ ಕಮಲಾನಂದರು. ೧೯೯೩ರಲ್ಲಿ ಸ್ವಾಮಿ ಪುರುಷೋತ್ತಮಾನಂದರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಬಳಿಕ ಸಾಧು ನಿವಾಸವನ್ನೂ ಅಡುಗೆ ಮನೆ-ಭೋಜನಶಾಲೆಯನ್ನೂ ಕಟ್ಟಿಸಿದ್ದಲ್ಲದೆ, ಆಶ್ರಮಕ್ಕೆ ಆವರಣದ ಗೋಡೆಯನ್ನೂ ಆಸ್ಪತ್ರೆಯ ಕಟ್ಟಡದ ಪುನರ್ನಿರ್ಮಾಣವನ್ನೂ ಮಾಡಿದರು. ಹಿಂದುಳಿದ ವರ್ಗಗಳ ಏಳ್ಗೆಗೆ ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡರು. ಬಡ ಮಹಿಳೆಯರಿಗೆ ವಸ್ತ್ರದಾನದ ಕಾರ್ಯಕ್ರಮವನ್ನು ಕೈಗೊಂಡರು. ಇವರ ಕಾಲದಲ್ಲಿ ಸಾಧನಾಶೀಲರಾದ ಅನೇಕ ಬ್ರಹ್ಮಚಾರಿಗಳು ಈ ಆಶ್ರಮವನ್ನು ಸೇರಿಕೊಂಡರು. ಸ್ವಾಮಿ ಪುರುಷೋತ್ತಮಾನಂದರು ಕರ್ನಾಟಕದಾದ್ಯಂತ ಸಂಚರಿಸಿ ಶ್ರೀರಾಮಕೃಷ್ಣ, ಮಹಾಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಭಾವಧಾರೆಯನ್ನು ಪ್ರಚಾರಮಾಡಿದ್ದಲ್ಲದೇ ಅಮೂಲ್ಯ ಗ್ರಂಥಗಳನ್ನೂ ರಚಿಸಿ ಜನಪ್ರಿಯರಾದರು. ಇವರಿಗೆ ಸಹಾಯಕರಾಗಿ ಸ್ವಾಮಿ ಜ್ಞಾನಮಯಾನಂದರು ಆಸ್ಪತ್ರೆಯ ಅಭಿವೃದ್ಧಿಗಾಗಿ ದುಡಿದರು.

"ಬದುಕಲು ಕಲಿಯಿರಿ" ಪುಸ್ತಕದಿಂದ ಪ್ರಸಿದ್ಧರಾಗಿರುವ, ಖ್ಯಾತ ವಾಗ್ಮಿಗಳಾದ ಸ್ವಾಮಿ ಜಗದಾತ್ಮಾನಂದಜಿಯವರು ಆಶ್ರಮದ ಪ್ರಸ್ತುತ ಅಧ್ಯಕ್ಷರಾಗಿರುವರು. ಇವರು ಆಶ್ರಮದ ಚಟುವಟಿಕೆಗಳನ್ನು ಇನ್ನೂ ವಿಸ್ತರಿಸುತ್ತಿರುವರು. ಆಶ್ರಮದಲ್ಲಿ ಸತ್ಸಂಗ ಶಿಬಿರಗಳು, ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಯುವಕರಿಗೆ ಆಧ್ಯಾತ್ಮಿಕ ಶಿಬಿರ, ಸರಕಾರೀ ಶಾಲೆಯ ಮಕ್ಕಳಿಗೆ ವಿಶೇಷ ಪಾಠವ್ಯವಸ್ಥೆ, ಬಡಜನರಿಗೆ ವಸ್ತ್ರದಾನ, ಶಾಲಾಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಸಮನ್ವಯ ಸಂದೇಶದ ಉಪನ್ಯಾಸಗಳು ಹೆಚ್ಚಿನ ಪ್ರಮಾಣದಲ್ಲಿ ಸುವ್ಯವಸ್ಥಿತವಾಗಿ ನಡೆಯುತ್ತಲಿವೆ. ಹೆಚ್ಚು ಹೆಚ್ಚು ಹಿರಿಯರು ಕಿರಿಯರು ಕಾಲೇಜು ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಲಿದ್ದಾರೆ.

ಇದೀಗ ಅಮೃತ ಮಹೋತ್ಸವದ ಅಂಗವಾಗಿ ನಾನಾ ಸೇವಾ ಕಾರ್ಯಗಳನ್ನು ಆಶ್ರಮ ಹಮ್ಮಿಕೊಂಡಿದೆ. ಈ ಕೆಳಗಿನವು ಮುಖ್ಯವಾದವು:

**೧) ಸುಸಜ್ಜಿತ ಶಸ್ತ್ರ ಚಿಕಿತ್ಸಾ ಕೋಣೆ,**

**೨) ಶಸ್ತ್ರಚಿಕಿತ್ಸಾನಂತರ ಶುಶ್ರೂಷೆ ಹಾಗೂ ವಿಶ್ರಾಂತಿ ಪಡೆಯಲು ಬೇಕಾದ ಕೋಣೆಗಳು,**

**೩) ಕೆಲಸಗಾರರ ವಸತಿಗೃಹಗಳು,**

**೪) ಲಿಫ್ಟ್ ಅಥವಾ ರ್‍ಯಾಂಪ್ ಅನುಕೂಲತೆಗಳು,**

**೫) ವಿದ್ಯುಜ್ಜನಕ ಯಂತ್ರ,**

**೬) ವೈದ್ಯಕೀಯ ತಪಾಸಣಾ ಶಿಬಿರಗಳು ಮತ್ತು**

**೭) ಬಡ ಹಾಗೂ ಹಿಂದುಳಿದ ವರ್ಗದ ರೋಗಿಗಳಿಗೆ ಧರ್ಮಾರ್ಥ ಔಷಧೋಪಚಾರಗಳಿಗಾಗಿ ನಿಧಿ.**

ಆಶ್ರಮದ ಎಲ್ಲ ಕಾರ್ಯಕ್ರಮಗಳಿಗೂ ಮಹಾಜನರ ಧನ ಸಹಾಯ ಪ್ರೋತ್ಸಾಹಗಳು ಆವಶ್ಯಕ. ಅವರ ಸಹಕಾರದೊಂದಿಗೆ ಜನಸೇವೆಯನ್ನು ಹೆಚ್ಚು ಯಶಸ್ವಿಯಾಗಿ ನೆರವೇರಿಸಲು ಸಾಧ್ಯವಾಗುತ್ತದೆ. ಈ ರೀತಿ ಸಹಕರಿಸುವುದರ ಮೂಲಕ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಭಾವ ಪ್ರಚಾರದಲ್ಲಿಯೂ ನೀವು ಭಾಗವಹಿಸಿದಂತಾಗುತ್ತದೆ.